(ಗೊಂದಲ)

ಶ್ರೀ ಯು.ಆರ್. ಸಭಾಪತಿ: ಅಧ್ಯಕ್ಷರೇ ಸರ್ಕಾರದ ನೀತಿ ಶಾಸಕರ ಮಟ್ಟಿಗೆ ಬಹಳ ದುರಂತಮಯವಾಗಿದೆ. ಇದರ ಬಗ್ಗೆ ನಮ್ಮ ಪಕ್ಷದ ನಾಯಕರೂ ಸರ್ಕಾರಕ್ಕೆ ತಿಳಿಹೇಳಿದ್ದಾರೆ. ಆದರೂ ಕೂಡ ಸರ್ಕಾರ ಇವತ್ತು ಶಾಸಕರಿಗೆ ಅಪಮರ್ಯಾದೆ ಮಾಡುವ ಬಗ್ಗೆ ನಮ್ಮ ಪಕ್ಷ ಕೂಡ ಪ್ರತಿಭಟಿಸಿ ನಾವೂ ಸಭಾತ್ಯಾಗ ಮಾಡುತ್ತೇವೆ.

(ಕೆ.ಸಿ.ಪಿ. ಸದಸ್ಯರೂ ಸಭಾತ್ಯಾಗ ಮಾಡಿದರು.)

ರಾಜ್ಯದ ಸಹಕಾರ ಸಂಘಗಳಿಗೆ ನಬಾರ್ಡ್ ಸಂಸ್ಥೆಯಿಂದ ಪುನರ್‌ಧನ

47-ಶ್ರೀ ಜಿ. ಬಸವಣ್ಣೆಪ್ಪ (ಹೊಳಿಹೊನ್ನೂರ್): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನಬಾರ್ಡ್ ಸಂಸ್ಥೆಯಿಂದ ರಾಜ್ಯದ ಸಹಕಾರ ಸಂಘಗಳಿಗೆ ಪುನರ್ಧನ ರೂಪದಲ್ಲಿ ವಿತರಣೆ ಮಾಡಿರುವ ಹಣವೆಷ್ಟು?*

ಆ) *ಈ ಪೈಕಿ ನೀರಾವರಿಗೆ ವಿನಿಯೋಗಿಸಲ್ಪಟ್ಟಿರುವ ಹಣದ ಪ್ರಮಾಣವೆಷ್ಟು?*

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು):

ಅ) 1995-96ನೇ ಸಾಲಿನಲ್ಲಿ ದಿನಾಂಕ: 15-8-1995ರವರೆಗೆ ನಬಾರ್ಡ್ ಸಂಸ್ಥೆಯಿಂದ 59.68 ಕೋಟಿ ರೂ.ಗಳು ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ಹಾಗೂ ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ 30.67 ಕೋಟಿ ರೂ.ಗಳು ಒಟ್ಟು 90.35 ಕೋಟಿ ರೂ.ಗಳನ್ನು ಪುನರ್ಧನ ರೂಪದಲ್ಲಿ ಒದಗಿಸಲಾಗಿದೆ.

ಆ) ಈ ಪೈಕಿ ನೀರಾವರಿ ಉದ್ದೇಶಕ್ಕೆ ವಿನಿಯೋಗಿಸಲಾದ ಹಣವು 17.80 ಕೋಟಿ ರೂ. ಗಳಾಗಿರುತ್ತದೆ.

ಶ್ರೀ ಜಿ. ಬಸವಣ್ಣೆಪ್ಪ: ಅಧ್ಯಕ್ಷರೇ ನಬಾರ್ಡ್ ಸಂಸ್ಥೆಯಿಂದ ಒಟ್ಟು 90.35 ಕೋಟಿ ರೂ. ಪುನರ್ಧನ ರೂಪದಲ್ಲಿ ಒದಗಿಸಿದ್ದಕ್ಕೆ ಮೊದಲನೆಯದಾಗಿ ಅಭಿನಂದನೆ ಸಲ್ಲಿಸುತ್ತಿದ್ದೇನೆ. ಈಗ ಎಲ್ಲಾ ಸಹಕಾರಿ ಸಂಘಗಳೂ ನಿಗದಿತ ಪ್ರಮಾಣದಲ್ಲಿ ಸಾಲ ವಸೂಲು ಮಾಡಿವೆಯೇ? ಇಲ್ಲದೇ ಹೋದರೆ ಸಾಲ ಬಾಕಿ ಇರುವ ಹಣವೆಷ್ಟು? ಸಾಲ ವಸೂಲಿ ಮಾಡದಿರುವ ಸಂಸ್ಥೆಗಳೆಷ್ಟು?

ಶ್ರೀ ಎಸ್.ಎಸ್. ಪಾಟೀಲ್: ಹನಿನೀರಾವರಿ ಬಗ್ಗೆ ತಾವು ಪ್ರಶ್ನೆ ಕೇಳಿಲ್ಲ, ಆದರೂ ತಮ್ಮ ಪ್ರಶ್ನೆಯಲ್ಲಿ ನೀರಾವರಿಗೆ ವಿನಿಯೋಗಿಸಿರುವ ಹಣದ ಪ್ರಮಾಣವೆಷ್ಟು ಎಂದಿದ್ದೀರಿ ಅದಕ್ಕೆ 17.80 ಕೋಟಿ ರೂಪಾಯಿಗಳನ್ನು ಹನಿನೀರಾವರಿಗಾಗಿ ಒದಗಿಸಿದೇವೆ.

ಶ್ರೀ ಜಿ. ಬಸವಣ್ಣಪ್ಪ: ಅಪೆಕ್ಸ್ ಬ್ಯಾಂಕ್‌ಗೆ ನೀವು ರೆಮಿಟ್ ಮಾಡಿದ್ದರೂ ಸಹ ಸಹಕಾರಿ ಸಂಘಗಳು ನೂರು ಪರ್ಸೆಂಟ್‌ನಷ್ಟು pay ಮಾಡಿದ್ದಾರೆ. ಆದರೆ ಅವರಿಗೆ ಮರು ಸಾಲ ಕೊಡಲು ಅಪೆಕ್ಸ ಬ್ಯಾಂಕಿನಿಂದ ಹಣ ಬಂದಿಲ್ಲವೆಂಬ ದೂರಿದೆ.

ಶ್ರೀ ಎಸ್.ಎಸ್. ಪಾಟೀಲ್: ಈಗಾಗಲೇ ಯಾರು ಸಾಲ ಪಂಚಿದ್ದಾರೆ ಅವರಿಗೆಲ್ಲ ಕೊಟ್ಟಿದ್ದೇವೆ. ಆದರೆ ಹೊಸ ಮೆಂಬರ್‌ಗಳನ್ನು ಮಾಡಿಕೊಳ್ಳುವುದು, ಮತ್ತು ಹೊಸದಾಗಿ ಕೆಲವು ಸಂಘಗಳು ನ್ಯಾಷನಲೈಸ್ಡ್ ಬ್ಯಾಂಕ್‌ಗೆ cede ಆಗಿದ್ದವು ಅವರಿಗೆ ಮಾತ್ರ ಕೊಡುವುದಕ್ಕೆ ಆಗಿಲ್ಲ ನಮಗೆ. ನಬಾರ್ಡನವರು ನಮಗೆ ಸ್ವಲ್ಪ ಲಿಮಿಟ್ ಕಡಿಮೆ ಮಾಡಿದ್ದಾರೆ. ಹೋದ ಸಲ ನಮಗೆ 204 ಕೋಟಿ ಮಂಜೂರು ಮಾಡಿದ್ದರೆ ಈ ಸಲ 173 ಕೋಟಿಯಷ್ಟೇ ಮಂಜೂರು ಮಾಡಿದ್ದಾರೆ, ಆ ದಿಸೆಯಲ್ಲಿ ಕೂಡ ಪ್ರಯತ್ನ ಮಾಡುತ್ತಿದ್ದೇವೆ, ಬಂದ ನಂತರ ಎಲ್ಲರಿಗೂ ಒದಗಿಸಲಾಗುವುದು.

ಶ್ರೀ ಕೆ.ಎನ್. ನಾಗೇಗೌಡ: ಅಧ್ಯಕ್ಷರೇ ಬಹಳ ಪ್ರಮುಖವಾದ ಪ್ರಶ್ನೆ. ನಬಾರ್ಡ್‌ನಿಂದ 300 ಕೋಟಿ ಕೇಳಿದ್ದರೂ 170 ಕೋಟಿ ಬಂದಿದೆಯೆಂದು ಏನು ಹೇಳಿದಿರಿ 50 ಪರ್ಸೆಂಟ್ ನಿಮಗೆ ಬಂದಿದೆ, ನಮ್ಮ ಡಿಸಿಸಿ ಬ್ಯಾಂಕಿನಲ್ಲಿ ಸುಮಾರು 40 ಪರ್ಸೆಂಟ್ ಕೆಲವು ಕಡೆ ರಿಕವರಿ ಆಗಿದೆ. ನಮ್ಮ ಮಂಡ್ಯ ಡಿಸಿಸಿ ಬ್ಯಾಂಕಿನಲ್ಲಿ ಸುಮಾರು 15 ಕೋಟಿ ರೂ. ಸಾಲ ಬೆಳೆಗೆ ಬೇಕಾಗಿದೆ. ಅವರ ಹತ್ತಿರ ಇರುವುದೇ ಕೇವಲ 5 ಕೋಟಿ ರೂ, ಆದ್ದರಿಂದ ಬೆಳೆ ಸಾಲದ ರೈತರಿಗೆ ಸಾಕಷ್ಟು ತೊಂದರೆಗಳಾಗಿದೆ. ಡಿಸಿಸಿ ಬ್ಯಾಂಕಿಗಳಲ್ಲಿ ಎಲ್‌ಸಿಎಸ್ ಸೊಸೈಟಿ ಮತ್ತೊಂದು ಕಡೆ ಬಿಎಲ್‌ಡಿ ಬ್ಯಾಂಕ್‌ಗಳಲ್ಲೂ ಸಿಕ್ಕುತ್ತಿಲ್ಲ. 40 ಪರ್ಸೆಂಟ್ ರಿಕವರಿ ಆಗಿದೆ ಇದ್ದರೆ ಟ್ರಾಕ್ಟರ್ ಲೋನಾಗಲಿ, ಪೌಲ್ಟ್ರಿ ಲೋನಾಗಲಿ ಮತ್ತೊಂದು ಸಿಗುತ್ತಿಲ್ಲ.

10.40 ಎ.ಎಂ.

ಇದಕ್ಕೆ ನಬಾರ್ಡ್ ಜೊತೆಯಲ್ಲಿ ಮಾತನಾಡಿ ಹಣ ತೆಗೆದುಕೊಂಡು ಬಂದು ಏನಾದರೂ ವ್ಯವಸ್ಥೆ ಮಾಡಲಿಕ್ಕೆ ಸಾಧ್ಯವಿದೆಯೇ?

ಶ್ರೀ ಎಸ್.ಎಸ್. ಪಾಟೀಲ್: ನಾವು ನಬಾರ್ಡ್‌ನೊಂದಿಗೆ ವ್ಯವಹರಿಸುತ್ತಿದ್ದೇವೆ. ಅವರು ಮಂಜೂರು ಮಾಡಿದರೆ ನಾವು ಈ ಒಂದು ವ್ಯವಸ್ಥೆ ಮಾಡುತ್ತಿದ್ದೇವೆ. ಆದರೂ ನಮ್ಮಲ್ಲಿರತಕ್ಕಂತಹ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಸಾಧ್ಯವಾದಷ್ಟು ಪ್ರಯತ್ನ ಮಾಡಿದ್ದೇವೆ. ಹೋದಸಲ ಈ ವೇಳೆಗೆ 170 ಕೋಟಿ ರೂಪಾಯಿ ಪಂಚಿದ್ದರೆ ಈ ಸಲ 307 ಕೋಟಿ ರೂಪಾಯಿಗಳ ಸಾಲವನ್ನು ಈಗಾಗಲೇ ಕೊಟ್ಟಿದ್ದೇವೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಭೂ ನ್ಯಾಯ ಮಂಡಳಿಗಳ ಬಾಕಿ ಉಳಿದ ಕೆಲಸ ಮಾಡುವ ಕುರಿತು.

876 - ಡಾ. ಯು. ಚಿತ್ತರಂಜನ್ (ಭಟ್ಕಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?